ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಮಂಡಲ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 26/6/2020

# ಶಾಸಕರ ಭವನ ಪ್ರವೇಶಕ್ಕೆ ಕಟ್ಟುನಿಟ್ಟು

26/6/20

ಸಂ.ಕ.ಸಮಾಚಾರ ಬೆಂಗಳೂರು

ಶಾಸಕರ ಭವನದಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿರುವ ಹಿನ್ನಲೆಯಲ್ಲಿ ಶಾಸಕರ ಭವನಕ್ಕೆ ಪ್ರವೇಶಕ್ಕೆ ಕೆಲವು ನಿರ್ಬಂಧನೆಗಳನ್ನು ವಿಧಿಸಲಾಗಿದೆ.

ಶಾಸಕರ ಭವನದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವರಿಗೆ ಸೋಂಕು ಕಾಣಿಸಿಕೊಂಡಿರುವ ಹಿನ್ನಲೆಯಲ್ಲಿ ವಿಧಾನಪರಿಷತ್ ಸಭಾಪತಿ ಪ್ರತಾಪಚಂದ್ರ ಶೆಟ್ಟಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ನೇತೃತ್ವದಲ್ಲಿ ಗೃಹ ಇಲಾಖೆ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರು ಮತ್ತಿತರ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದ್ದು, ಶಾಸಕರ ಭವನದ ಕಟ್ಟಡಗಳಿಗೆ ಸೋಂಕು



ನಿವಾರಣ ಔಷಧಿ ಸಿಂಪಡಣೆ ಮಾಡಬೇಕು. ಶಾಸಕರ ಭವನಕ್ಕೆ ಪ್ರವೇಶ ಮಾಡುವವರು ಕಡ್ಡಾಯವಾಗಿ ಅವರ ಮೊಬೈಲ್ ಸಂಖ್ಯೆ ನಮೂದು ಮಾಡಬೇಕು. ಭೇಟಿಯ ಉದ್ದೇಶ ಸ್ಪಷ್ಟಪಡಿಸಬೇಕು. ಶಾಸಕರು ಹಾಗೂ ಅವರ ಆಪ್ತ ಸಹಾಯಕರ ವಾಹನಗಳನ್ನು ಹೊರತುಪಡಿಸಿ ಬೇರೆ ವಾಹನಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ. ಶಾಸಕರ ಜೊತೆ ಅವರ ಆಪ್ತಸಹಾಯಕ, ಅಂಗರಕ್ಷಕ, ಚಾಲಕ ಸೇರಿ ನಾಲ್ವರಿಗೆ ಮಾತ್ರ ಪ್ರವೇಶ. ಶಾಸಕರ ಭವನದ ಎಲ್ಲ ಸಿಬ್ಬಂದಿಗೆ ಕಡ್ಡಾಯವಾಗಿ ಕೊರೊನಾ ತಪಾಸಣೆ ಮಾಡುವುದು, ಶಾಸಕರ ಹೊರತಾಗಿ ಬೇರೆಯವರು ಭವನದಲ್ಲಿದ್ದರೆ ಅವರ ಮಾಹಿತಿ ಸಂಗ್ರಹಿಸಿ ಅನಗತ್ಯವಾಗಿ ತಂಗಿರುವವರನ್ನು ತೆರವು ಮಾಡಬೇಕು. ಇಲ್ಲಿ ನಡೆಯುವ ವಿಧಾನಮಂಡಲ ಸಮಿತಿ ಸಭೆ ಸಮಾರಂಭಗಳಿಗೆ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದಲ್ಲದೆ, ಸಭೆ ನಡೆಸುವ ಮೊದಲು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಅಧಿಕಾರಿಗಳ ಸಂಖ್ಯೆಯನ್ನೂ ಸೀಮಿತಗೊಳಿಸಬೇಕೆಂದು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.